**<u>ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರ ದ ನ್ಯಾದಂ.ರವರ ನ್ಯಾಯಾಲಯ, ಹೆಚ್.ಡಿ.ಕೋಟೆ</u>**

**<u>ಸಿ.ಸಿ.ನಂ. 347/14</u>**

ಫಿರ್ಯಾದಿ : ಸರ್ಕಾರದ ಪರವಾಗಿ ಹೆಚ್.ಡಿ.ಕೋಟೆ ಪೋಲೀಸ್ ಠಾಣೆ

-ವಿರುದ್ಧ-

ಆರೋಪಿಗಳು : ಸಿ.ಬಿ.ನಿಂಗರಾಜು
ಬಿನ್ ಚಲುವಯ್ಯ, 30 ವರ್ಷ,
ವಾಸಃ ಕಾಡಬೇಗೂರು ಗ್ರಾಮ,
ಕಂದಲಿಕೆ ಹೋಬಳಿ,
ಹೆಚ್.ಡಿ.ಕೋಟೆ ತಾ.

**<u>ದೋಷಾರೋಪಣೆ</u>**

ಶ್ರೀ ಸಂದೇಶ್ ಪ್ರಭು. ಬಿ., ಬಿ.ಎ(ಲಾ)., ಎಲ್ಎಲ್.ಬಿ., ಪಿ ಜಿ ಡಿ ಹೆಚ್ ಆರ್ ಎಂ., ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.ಹೆಚ್.ಡಿ.ಕೋಟೆ ಆದ ನಾನು ಆರೋಪಿತರಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆಃ

ದಿನಾಂಕಃ 31.03.2004 ರಿಂದ ದಿನಾಂಕಃ 01.04.2005 ರ ವರಗೆ ಅಂದರೆ 2004-05 ನೇ ಸಾಲಿನಲ್ಲಿ ಹೆಚ್.ಡಿ.ಕೋಟೆ ಗಿರಿಜನ ದೊಡ್ಡಪ್ರಮಾಣದ ವಿವಿದೋದ್ದೇಶ ಸಹಕಾರ ಸಂಘ (ನಿ) ಯಲ್ಲಿ ಪ್ರಭಾರ ಕಾರ್ಯದರ್ಶಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಆರೋಪಿಯಾದ ನೀವು ಸಹಕಾರ ಸಂಘದ ಗೋದಾಮಿನಲ್ಲಿ ಸಂಗ್ರಹಿಸಿದ್ದ ಗೋಂದು, ಜೋನು ಮತ್ತು ಮರದ ಪಾಚಿಯನ್ನು ಆಡಳಿತ ಮಂಡಳಿ ನಿರ್ಣಯಿಸಿದ್ದಕ್ಕಿಂತ ಕಡಿಮೆ ಬೆಲೆಗೆ ಮಾರಾಟ ಮಾಡಿ ನೀವು ಕೆಲಸಮಾಡುತ್ತಿದ್ದ ಸಂಘಕ್ಕೆ ನಂಬಿಕೆ ದ್ರೊಹ ಮಾಡಿದ್ದು, ಆ ಮೂಲಕ ಆರೋಪಿಗಳಾದ ನೀವುಗಳು ಭಾ.ದಂ.ಸಂ.ಕಲಂ.408 ಸಹವಾಚಕ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಅಧಿಕಾರ ವ್ಯಾಪ್ತಿಯ ಪರಿಮಿತಿಯೊಳಗೆ ಮಾಡಿರುತ್ತೀರಿ.

ಕೊನೆಯದಾಗಿ ಅದೇ ಸಾಲಿನ, ಅದೇ ಸ್ಥಳದಲ್ಲಿ ಮೇಲ್ಕಂಡ ಆರೋಪಿಯಾದ ನೀವುಗಳು ಮೇಲ್ಕಂಡತೆ ಸಹಕಾರ ಸಂಘದ ಗೋದಾಮಿನಲ್ಲಿ ಸಂಗ್ರಹಿಸಿದ್ದ ಗೋಂದು, ಜೋನು ಮತ್ತು ಮರದ ಪಾಚಿಯನ್ನು ಆಡಳಿತ ಮಂಡಳಿ ನಿರ್ಣಯಿಸಿದ್ದಕ್ಕಿಂತ ಕಡಿಮೆ ಬೆಲೆಗೆ ಮಾರಾಟ ಮಾಡಿ ಒಟ್ಟು ರೂ. 14,712.75/- ಗಳನ್ನು ನಿಮ್ಮ ಸ್ವಂತಕ್ಕೆ ಬಳಸಿ, ದುರುಪಯೋಗಪಡಿಸಿಕೊಂಡು ಸಂಘಕ್ಕೆ ಮೋಸ ಮಾಡಿದ್ದು, ಆ ಮೂಲಕ ಆರೋಪಿಗಳಾದ ನೀವುಗಳು ಭಾ.ದಂ.ಸಂ.ಕಲಂ.420 ಸಹವಾಚಕ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಅಧಿಕಾರ ವ್ಯಾಪ್ತಿಯ ಪರಿಮಿತಿಯೊಳಗೆ ಮಾಡಿರುತ್ತೀರಿ.

ದಿನಾಂಕಃ

SANDESH PRABHU B
Digitally signed by SANDESH PRABHU B
Date: 2023.10.13 16:45:20 +0530

(ಸಂದೇಶ್ ಪ್ರಭು. ಬಿ.)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ
ಹೆಚ್ ಡಿ ಕೋಟೆ

## **ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರ ದ ನ್ಯಾದಂ.ರವರ ನ್ಯಾಯಾಲಯ, ಹೆಚ್.ಡಿ.ಕೋಟೆ**

## **ಸಿ.ಸಿ.ನಂ. 347/14**

ಫಿರ್ಯಾದಿ : ಸರ್ಕಾರದ ಪರವಾಗಿ ಹೆಚ್.ಡಿ.ಕೋಟೆ ಪೋಲೀಸ್ ಠಾಣೆ

-ವಿರುದ್ಧ-

ಆರೋಪಿಗಳು : ಸಿ.ಬಿ.ನಿಂಗರಾಜು
ಬಿನ್ ಚಲುವಯ್ಯ, 30 ವರ್ಷ,
ವಾಸಃ ಕಾಡಬೇಗೂರು ಗ್ರಾಮ,
ಕಂದಲಿಕೆ ಹೋಬಳಿ,
ಹೆಚ್.ಡಿ.ಕೋಟೆ ತಾ.

### **ಆರೋಪಿಯ ಹೇಳಿಕೆ**

ಈ ಮೇಲಿನ ದೋಷಾರೋಪಣೆಗಳಿಗಾಗಿ ಆರೋಪಿತರಾದ ನೀವು ಈ ನ್ಯಾಯಾಲಯದಲ್ಲಿ ವಿಚಾರಣೆಗೊಳಪಡತಕ್ಕದೆಂದು ನಿರ್ದೇಶಿಸಿರುತ್ತೇನೆ.

ಪ್ರಶ್ನೆ : ಮೇಲೆ ಓದಿ ಹೇಳಿದ ದೋಷಾರೋಪಣೆಯನ್ನು ಕೇಳಿ ತಿಳಿದುಕೊಂಡಿದ್ದೀರಾ?

ಉತ್ತರ

ಪ್ರಶ್ನೆ : ಈ ದೋಷಾರೋಪಣೆಯನ್ನು ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆಯಾಗ ಬೇಕೆನ್ನುವಿರೋ?

ಉತ್ತರ

(ಆರೋಪಿತರಿಗೆ ತಿಳಿದಿರುವ ಕನ್ನಡ ಭಾಷೆಯಲ್ಲಿ ಈ ದೋಷಾರೋಪಣೆಯನ್ನು ಓದಿ ತಿಳಿಸಿ ಹೇಳಲಾಗಿ ಸದರಿ ಆರೋಪಿತರು ಹೇಳಿದ ಉತ್ತರಗಳನ್ನು ಯಥಾವತ್ತಾಗಿ ಬರೆದುಕೊಳ್ಳಲಾಯಿತೆಂದು ದೃಢೀಕರಿಸಿರುತ್ತೇನೆ.)

ದಿನಾಂಕಃ

(ಸಂದೇಶ್ ಪ್ರಭು. ಬಿ.)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ
ಹೆಚ್ ಡಿ ಕೋಟೆ